ದಿನಾಂಕ:03–03–1987ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ಪ್ರದೇಶವು ಅರಣ್ಯ ವ್ಯಾಪ್ತಿಯಲ್ಲಿ ಬರುವುದರಿಂದ ಅರಣ್ಯ ಇಲಾಖೆಯೊಂದಿಗೆ ಸಮಾಲೋಚಿಸಿದಂತೆ ಅರಣ್ಯ ಇಲಾಖೆಯ ಅನುಮತಿ ಪಡೆಯುವ ಷರತ್ತಿಗೊಳಪಟ್ಟು ನವೀಕರಣದ ಬಗ್ಗೆ ತಾಂತ್ರಿಕ ಅನುಮೋದನೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಗಣಿ ಗುತ್ತಿಗೆ ನವೀಕರಣದ ಬಗ್ಗೆ ಅಧಿಸೂಚನೆಯನ್ನು ಹೊರಡಿಸಬಹುದು, ತರುವಾಯ, ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಖ್ಯೆ ಇವರು ಗಣಿ ಚಟುವಟಿಕೆಗಳನ್ನು ಕೈಗೊಳ್ಳಬಹುದು.

2298(2577) ಶ್ರೀ ಜಗದೀಶ್ (ವಿರುಪಾಕ್ಷಿ) ಸಿ. ಮೆಟಗುಡ್. (ಬೈಲಹೊಂಗಲ):–ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲುದ್ದೇಶಿಸಿರುವ ಏತ ನೀರಾವರಿ ಯೋಜನೆ ಕಾಮಗಾರಿಗಳು ಎಷ್ಟು; ಅವು ಯಾವುದು?

ಆ) ಈ ಪೈಕಿ ಬೈಲಹೊಂಗಲ ತಾಲ್ಲೂಕಿನ ದೇವಲಾಪೂರ ಗ್ರಾಮದ ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿದೆ?

ಇ) ಇದರ ಯೋಜನಾ ವೆಚ್ಚ, ಗ್ರಾತ್ರ ಎಷ್ಟು;

ಈ) ಈ ಕಾಮಗಾರಿಯನ್ನು ಯಾವಾಗ ಅನುಷ್ಠಾನಗೊಳಿಸುತ್ತದೆ;

ಉ) ಯಾವಾಗ ಮುಗಿಸಲಾಗುತ್ತಿದೆ;

ಊ) ವಿಳಂಬಕ್ಕೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಯಾವಾಗ ಮುಗಿಸಲಾಗುತ್ತಿದೆ;

ಊ) ವಿಳಂಬಕ್ಕೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬೆಳಗಾಂ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಏತ ನೀರಾವರಿ ಯೋಜನೆಗಳ ವಿವರ ಈ ಕೆಳಗಿನಂತಿದೆ.

ಪ್ರಗತಿಯಲ್ಲಿರುವ

ಯೋಜನೆಗಳು		ಹೊಸ ಯೋಜನೆಗಳು	
1.	ಕೊಟಬಾಗಿ	1.	ಶ್ರೀ ರಾಮೇಶ್ವರ
2.	ದಡ್ಡಿ ನಾಗನೂರ	2.	ಹಿರಣ್ಯಕೇಶಿ ನದಿಯಿಂದ ನೀರೆತ್ತಿ ಘಟಪ್ರಭ ಬಲದಂಡೆ ಕಾಲುವೆಗೆ ಹರಿಸುವ ಯೋಜನೆ

3.	ರುಸ್ತುಂಪೂರ	3.	ಜವಳ ಹಳ್ಳ
4.	ಕಬ್ಬೂರ		
5.	ದೇವಲಾಪೂರ		

ಆ) ದೇವಲಾಪೂರ ಏತ ನೀರಾವರಿ ಯೋಜನೆಯಡಿ ಪ್ರಗತಿಯಲ್ಲಿರುವ ಹೊಲಗಾಲುವೆ ಕೆಲಸಗಳು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಇ) ಸದರಿ ಯೋಜನೆಯ ಅಂದಾಜು ಮೊತ್ತವು ರೂ. 565.65 ಲಕ್ಷಗಳಾಗಿದ್ದು, ಇಲ್ಲಿಯವರೆಗೆ ರೂ. 366.15 ಲಕ್ಷ ವೆಚ್ಚವಾಗಿರುತ್ತದೆ.

ಈ ಯೋಜನೆಯಿಂದ ನೀರಾವರಿಗೆ ಒಳಪಡುವ ಕ್ಷೇತ್ರ 1328 ಹೆಕ್ಟೇರುಗಳು.

ಈ) ಸದರಿ ಯೋಜನೆಯನ್ನು ಜುಲೈ–2005 ರೊಳಗಾಗಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

ಉ) ಈಯೋಜನೆಯ ನಿರ್ಮಾಣ ಕಾಮಗಾರಿಗಳು ಅಂದರೆ ಸಿವಿಲ್ ಕಾಮಗಾರಿಗಳು, ಯಂತ್ರೋಪಕರಣಗಳನ್ನು ಜೋಡಿಸುವ ಕಾರ್ಯಗಳು ಮುಗಿದಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಕ್ರಿಯೆಯನ್ನು ಜುಲೈ–2005ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಸದರಿ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ನಿರ್ಮಾಣದ ಸ್ಥಳವು ಮಲಪ್ರಭಾ ಜಲಾಶಯದ ಹಿನ್ನೀರಿನಲ್ಲಿ ಮುಳುಗುತ್ತಿದ್ದು, ಪ್ರತಿ ವರ್ಷ ಜಲಾಶಯದ ನೀರಿನ ಮಟ್ಟ ಕಡಿಮೆಯಾದ ನಂತರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗುತ್ತಿತ್ತು. ಆದ ಕಾರಣ ಜಾಕ್‌ವೆಲ್ ನಿರ್ಮಾಣದ ಕಾರ್ಯದಲ್ಲಿ ವಿಳಂಬವಾಗಿರುತ್ತದೆ. ಯಂತ್ರೋಪಕರಣಗಳ ಸ್ಥಾವರದ ಕೆಲಸವನ್ನು ಜನವರಿ–2003ರಲ್ಲಿ ಪ್ರಾರಂಭಿಸಿದ್ದು, ಎಲ್ಲ ಯಂತ್ರೋಪಕರಣಗಳ ಸ್ಥಾವರದ ಕೆಲಸವನ್ನು ಜನವರಿ–2003ರಲ್ಲಿ ಪ್ರಾರಂಭಿಸಿದ್ದು, ಎಲ್ಲ ಯಂತ್ರೋಪಕರಣ ಹಾಗೂ ವಿದ್ಯುತ್ ಹಾಗೂ ವಿದ್ಯುತ್ ಸ್ಥಾವರಗಳ ಕೆಲಸಗಳು ಪೂರ್ಣಗೊಂಡಿರುತ್ತವೆ. ಮೀಟರಿಂಗ್ ಕ್ಯೂಬಿಕಲ್‌ನ್ನು ವಿದ್ಯುತ್ ಇಲಾಖೆಯವರು ಅಳವಡಿಸಬೇಕಾಗಿದೆ. ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರೊಂದಿಗೆ ಜುಲೈ–2005ರ ಒಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಋ) ಈ ಯೋಜನೆಯ ನಿರ್ಮಾಣ ಕಾಮಗಾರಿಗಳು ಅಂದರೆ ಸಿವಿಲ್ ಕಾಮಗಾರಿಗಳು, ಯಂತ್ರೋಪಕರಣಗಳನ್ನು ಜೋಡಿಸುವ ಕಾರ್ಯಗಳು ಮುಗಿದಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಕ್ರಿಯೆಯನ್ನು ಜುಲೈ–2005ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಸದರಿ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ನಿರ್ಮಾಣದ ಸ್ಥಳವು ಮಲಪ್ರಭಾ ಜಲಾಶಯದ ಹಿನ್ನೀರಿನಲ್ಲಿ ಮುಳುಗುತ್ತಿದ್ದು, ಪ್ರತಿ ವರ್ಷ ಜಲಾಶಯದ ನೀರಿನ ಮಟ್ಟ ಕಡಿಮೆಯಾದ ನಂತರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗುತ್ತಿತ್ತು. ಆದ ಕಾರಣ ಜಾಕ್‌ವೆಲ್ ನಿರ್ಮಾಣದ ಕಾರ್ಯದಲ್ಲಿ ವಿಳಂಬವಾಗಿರುತ್ತದೆ. ಯಂತ್ರೋಪಕರಣಗಳ ಸ್ಥಾವರದ ಕೆಲಸವನ್ನು ಜನವರಿ–2003ರಲ್ಲಿ ಪ್ರಾರಂಭಿಸಿದ್ದು, ಎಲ್ಲ ಯಂತ್ರೋಪಕರಣ ಹಾಗೂ ವಿದ್ಯುತ್ ಸ್ಥಾವರಗಳ ಕೆಲಸಗಳು ಪೂರ್ಣಗೊಂಡಿರುತ್ತವೆ. ಮೀಟರಿಂಗ್ ಕ್ಯೂಬಿಲ್‌ನ್ನು ವಿದ್ಯುತ್ ಇಲಾಖೆಯವರು ಅಳವಡಿಸಬೇಕಾಗಿದೆ. ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರೊಂದಿಗೆ ಜುಲೈ–2005ರ ಒಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

2299(2129) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಕೇಂದ್ರ ಸ್ಥಾನದಿಂದ ಖಾಸಗಿ ಬಸ್‌ನವರಿಗೆ 20 ಕಿ.ಮೀ ವರೆಗೆ ಬಸ್ ನಡೆಸಲು ಅವಕಾಶ ನೀಡುವ ಅಧಿಸೂಚನೆಯನ್ನೇನಾದರು ಸರ್ಕಾರ ಹೊರಡಿಸಿದೆಯೇ;

ಆ) ಈ ಅಧಿಸೂಚನೆಯಿಂದ ಸರ್ಕಾರ ಸಂಸ್ಥೆಗೆ ನಷ್ಟವಾಗುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೆ:

ಇ) ಹಾಗಿದ್ದಲ್ಲಿ ಈ ಅಧಿಸೂಚನೆ ರದುಗೊಳಿಸಲು ಸರ್ಕಾರ ಚಿಂತಿಸಿದೆಯೇ;

ಈ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಬೇಂದ್ರೆ, ನಗರ ಸಾರಿಗೆ ಸಂಸ್ಥೆಗೆ ಪರವಾನಗಿ ಕೊಟ್ಟಿರುವುದರಿಂದ ಅಲ್ಲಿನ ಜನ ಇದನ್ನು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಪರವಾಗಿ ವಾಪಸ್ಸು ಪಡೆಯಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಪರಿಶೀಲನೆಯಲ್ಲಿದೆ.

2300(3096) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಲ್ಕು ದಶಕದ ಹಿಂದೆ ಗುದ್ದಲಿ ಪೂಜೆ ಮಾಡಿದಂದಿನಿಂದ ಮದ್ಯ ಕರ್ನಾಟಕದ ಭದ್ರಾ ನಾಲೆಗಳು ದುರಸ್ತಿಯನ್ನು ಕಾಣದೇ ಅವ್ಯವಸ್ಥೆಯ ಪರಮಾವಧಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?